ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

16

ಇಲಾಖೆ / ವಿಷಯ : DEPARTMENT / SUBJECT: ಕೊರೊನಾ-19

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 2/1/2021

# ಕರೊನಾ ಲಸಿಕೆ ಬಳಕೆಗೆ ಓಕೆ

ವಿ.ವಾ. 2-1-2021

## ಭಾರತದಲ್ಲಿ ಕೋವಿಶೀಲ್ಡ್ ತುರ್ತು ಬಳಕೆಗೆ ಸಿಕ್ಕಿತು ಹಸಿರು ನಿಶಾನೆ

## ಹೊಸ ವರ್ಷದ ಕೊಡುಗೆ | ಇಂದೇ ರಾಜ್ಯಗಳಿಗೆ ರವಾನೆ ಸಾಧ್ಯತೆ

**ನವದೆಹಲಿ:** ಹೊಸ ರೂಪದೊಂದಿಗೆ ಲಗ್ಗೆ ಇಟ್ಟಿರುವ ಕರೊನಾ ಮಹಾಮಾರಿಗೆ ಇಡೀ ದೇಶ ಬೆಚ್ಚಿರುವ ಸಂದರ್ಭದಲ್ಲೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೊಸ ವರ್ಷದ ಕೊಡುಗೆಯಾಗಿ ಭಾರತೀಯರಿಗೆ ಸಿಹಿ ಸುದ್ದಿ ಪ್ರಕಟಿಸಿದೆ. ಕೋವಿಡ್ -19 ತುರ್ತು ಚಿಕಿತ್ಸೆಗಾಗಿ ಆಕ್ಸ್‌ಫರ್ಡ್-ಅಸ್ಟ್ರಾಜೆನಿಕಾ ಕಂಪನಿಯ ಕೊವಿಶೀಲ್ಡ್ ಲಸಿಕೆ ಬಳಸುವಂತೆ ಕೇಂದ್ರ ಸರ್ಕಾರ ರಚಿಸಿದ್ದ ವಿಶೇಷ ತಜ್ಞರ ಸಮಿತಿ ಶಿಫಾರಸು ಮಾಡಿದೆ. ಡಿಸಿಜಿಐ (ಭಾರತೀಯ ಔಷಧಗಳ ಮಹಾ ನಿಯಂತ್ರಕ) ಸಮ್ಮತಿ ದೊರೆತ ಬಳಿಕ ಲಸಿಕೆ ಬಳಕೆಗೆ ಮುಕ್ತವಾಗಲಿದೆ.

» **ಲಸಿಕೆಗೆ ತಜ್ಞರ ಸಮಿತಿ ಶಿಫಾರಸು**

» **ಡಿಸಿಜಿಐ ಅನುಮತಿ ಬಾಕಿ**

ರೂಪಾಂತರಿ ಕರೊನಾ ಸೋಂಕಿತರ ಪ್ರಕರಣ ದೇಶದಲ್ಲಿ ಹೆಚ್ಚುತ್ತಿರುವ ಬೆನ್ನಲ್ಲೇ ಲಸಿಕೆಯ ತುರ್ತು ಬಳಕೆಗೆ ಅನುಮತಿ ನೀಡುವಂತೆ ಆಕ್ಸ್‌ಫರ್ಡ್-ಅಸ್ಟ್ರಾಜೆನಿಕಾ ಮತ್ತು ಭಾರತ್ ಬಯೋಟೆಕ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದವು. ಈ ಸಂಬಂಧ ಕೇಂದ್ರೀಯ ಔಷಧಗಳ ಮಾನಕ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ನೇಮಿಸಿದ್ದ ವಿಷಯ ತಜ್ಞರ ಸಮಿತಿ ಶುಕ್ರವಾರ ಸಭೆ ನಡೆಸಿ ಲಸಿಕೆ ಬಳಕೆಗೆ ಸಮ್ಮತಿ ನೀಡಿತು. ಜಗತ್ತಿನ ಅತಿ ದೊಡ್ಡ ಲಸಿಕೆ ತಯಾರಿಕೆ ಸಂಸ್ಥೆ, ಪುಣೆ ಮೂಲದ ಭಾರತೀಯ ಸೆರಂ (ಎಸ್‌ಐಐ) ಸಲ್ಲಿಸಿದ್ದ ದತ್ತಾಂಶಗಳನ್ನು ಪರಿಶೀಲಿಸಿದ ಬಳಿಕ ಸಮಿತಿ ಅನುಮೋದನೆ ನೀಡಿದೆ.

**8 ತಿಂಗಳು, 30 ಕೋಟಿ ಗುರಿ:** ಜಗತ್ತಿನಲ್ಲೇ ಕರೊನಾ ಸೋಂಕಿತರಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಮುಂದಿನ ಆರರಿಂದ ಎಂಟು ತಿಂಗಳಲ್ಲಿ 30 ಕೋಟಿ ಜನರಿಗೆ ಕೊವಿಡ್-19 ಲಸಿಕೆ ನೀಡಲು ಸರ್ಕಾರ ಉದ್ದೇಶಿಸಿದೆ. ಅಗ್ಗದ ಆಕ್ಸ್‌ಫರ್ಡ್ ಲಸಿಕೆ ಅದರ ದೊಡ್ಡ ಆಶಾವಾದವಾಗಿದೆ. ಸೆರಂನೊಂದಿಗೆ ಭಾರತ ಸರ್ಕಾರ ಇನ್ನೂ ಅಧಿಕೃತ ಒಪ್ಪಂದ ಮಾಡಿಕೊಂಡಿಲ್ಲ. ಆದರೆ, ದೇಶೀಯ ಮಾರುಕಟ್ಟೆಗೆ ತನ್ನ ಮೊದಲ ಆದ್ಯತೆಯೆಂದು ಸಂಸ್ಥೆ ಸ್ಪಷ್ಟಪಡಿಸಿದೆ. ನಂತರ ರಫ್ತಿಗೆ ಗಮನ ನೀಡಲಿದೆ.

**o ಪುಟ 2A**




### ಎಲ್ಲೆಲ್ಲಿದೆ ಅನುಮತಿ

ಬ್ರಿಟನ್, ಅರ್ಜೆಂಟಿನಾದಲ್ಲಿ ಈಗಾಗಲೇ ಆಸ್ಟ್ರಾಜೆನಿಕಾ, ಆಕ್ಸ್‌ಫರ್ಡ್‌ನ ಕೋವಿಶೀಲ್ಡ್ ಲಸಿಕೆಯ ತುರ್ತು ಬಳಕೆಗೆ ಅನುಮತಿ ದೊರೆತಿದೆ.

### ಎಷ್ಟಿರಬಹುದು ಬೆಲೆ?

ಭಾರತ ಸರ್ಕಾರಕ್ಕೆ ಕೊವಿಶೀಲ್ಡ್ ಲಸಿಕೆಯ ಪ್ರತಿ ಡೋಸ್ ಬೆಲೆ 220 ರೂಪಾಯಿ (3 ಡಾಲರ್). ಇತರ ಎಲ್ಲ ವೆಚ್ಚ ಸೇರಿ ಒಬ್ಬ ವ್ಯಕ್ತಿಗೆ ಲಸಿಕೆ ಹಾಕಲು ಒಟ್ಟು 440 ರೂ. (6 ಡಾಲರ್) ತಗಲುತ್ತದೆ. ಖಾಸಗಿ ಮಾರುಕಟ್ಟೆಯಲ್ಲಾದರೆ ತಲಾ ಡೋಸ್ ಬೆಲೆ 700-800 ರೂ.ಆಗುತ್ತದೆ.

### ಯಾರಿಗೆ ಲಭ್ಯ?

- ಮುಂಚೂಣಿ ಆರೋಗ್ಯ ಕಾರ್ಯಕರ್ತರು, ವೃದ್ಧರಿಗೆ ಮೊದಲ ಹಂತದಲ್ಲಿ ಆದ್ಯತೆ ಮೇರೆಗೆ ಲಸಿಕೆ ಹಾಕಲಾಗುತ್ತದೆ
- 29,000 ಲಸಿಕಾ ಪಾಯಿಂಟ್‌ಗಳಿಗೆ ಲಸಿಕೆ ಸರಬರಾಜು ಮಾಡಲು 31 ಕೇಂದ್ರಗಳನ್ನು ಸ್ಥಾಪಿಸಲಾಗಿದೆ

### ಭಾರತದ ಅಂಕಿಸಂಖ್ಯೆ

1,02,88,158
ಒಟ್ಟು ಸೋಂಕಿತರು

98,83,813
ಚೇತರಿಕೆ

2.54 ಲಕ್ಷ
ಸಕ್ರಿಯ ಪ್ರಕರಣ

1,49,032
ಒಟ್ಟು ಮೃತರು

### ಅನುಕೂಲಗಳೇನು?

ಹೆಚ್ಚಿನ ಫ್ರೀಜಿಂಗ್ ಅಗತ್ಯ ಇಲ್ಲದಿರುವುದರಿಂದ ಸಾಮೂಹಿಕ ಲಸಿಕೆ ಕಾರ್ಯಕ್ರಮದ ಗುರಿ ಹೊಂದಿರುವ ಭಾರತಕ್ಕೆ ಕೊವಿಶೀಲ್ಡ್ ಲಸಿಕೆಯೇ ಹೆಚ್ಚು ಅಪ್ಯಾಯಮಾನವಾಗಲಿದೆ. ಲಸಿಕೆಯ ಉತ್ಪಾದನೆ ವೆಚ್ಚ ಕೂಡ ಕಡಿಮೆ. ಇದು ಬಡ ದೇಶಗಳಲ್ಲಿ ಆಶಾವಾದ ಮೂಡಿಸಿದೆ.

## ಇಂದಿನಿಂದ ರಾಜ್ಯದಲ್ಲಿ ತಾಲೀಮು

**ಬೆಂಗಳೂರು:** ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಕೋವಿಡ್ ಲಸಿಕೆಯ ಪೂರ್ವಾಭ್ಯಾಸ (ಡ್ರೈರನ್) ಕಾರ್ಯಾಚರಣೆಗೆ ಕರ್ನಾಟಕದ ಐದು ಜಿಲ್ಲೆ ಸೇರಿದಂತೆ ದೇಶಾದ್ಯಂತ ಶನಿವಾರ ಚಾಲನೆ ಸಿಗಲಿದೆ. ಕ್ಷೇತ್ರೀಯಮಟ್ಟದಲ್ಲಿ ಎದುರಾಗುವ ಸವಾಲು ಗಮನದಲ್ಲಿರಿಸಿ ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ, ಶಿವಮೊಗ್ಗ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ.

» **5 ಜಿಲ್ಲೆಗಳಲ್ಲಿ ಲಸಿಕೆ ಡ್ರೈರನ್**

**ಎ ವಿವರ ಪುಟ 9**

## ಎಲ್ಲರಿಗೂ ಲಸಿಕೆ ಉಚಿತವಿಲ್ಲ



ಲಸಿಕೆ ನೀಡಿಕೆ ವೆಚ್ಚಕ್ಕೆ ಸಂಬಂಧಿಸಿದಂತೆ ಸರ್ಕಾರ ಶುಕ್ರವಾರ ಮಹತ್ವದ ಸ್ಪಷ್ಟನೆ ನೀಡಿದೆ. ಆದ್ಯತೆ ವಿಭಾಗದಲ್ಲಿ ಬರುವ 30 ಕೋಟಿ ಜನರ ಲಸಿಕಾ ವೆಚ್ಚವನ್ನು ಮಾತ್ರ ಸರ್ಕಾರ ಭರಿಸಲಿದೆ. ದೇಶದ ಎಲ್ಲರಿಗೂ ಉಚಿತವಾಗಿ ನೀಡಲಾಗದೆಂದು ನೀತಿ ಆಯೋಗದ ಸದಸ್ಯ ಹಾಗೂ ರಾಷ್ಟ್ರೀಯ ಕೊವಿಡ್-19 ಕಾರ್ಯ ಪಡೆ ಮುಖ್ಯಸ್ಥ ವಿನೋದ್ ಪೌಲ್ ಹೇಳಿದ್ದಾರೆ.

## ಐದು ಕೋಟಿ ಡೋಸ್

ಅಸ್ಟ್ರಾಜೆನಿಕಾ ಲಸಿಕೆಯ ಸ್ಥಳೀಯ ಉತ್ಪಾದಕರಾದ ಭಾರತೀಯ ಸೆರಂ ಸಂಸ್ಥೆ (ಎಸ್‌ಐಐ) ಬಳಿ ಈಗಾಗಲೇ ಲಸಿಕೆಯ 5 ಕೋಟಿ ಡೋಸ್ ಸಂಗ್ರಹವಿದೆ. ಶೈತ್ಯಾಗಾರದಿಂದ ಲಸಿಕೆಯನ್ನು ಎಲ್ಲ ರಾಜ್ಯಗಳಿಗೆ ಸಾಗಿಸುವ ಕೆಲಸ ಶನಿವಾರವೇ ಆರಂಭವಾಗಬಹುದೆನ್ನಲಾಗಿದೆ.

17

# ಕರೊನಾ ಲಸಿಕೆ ಬಳಕೆಗೆ ಓಕೆ

**ಮೊದಲನೇ ಪುಟದಿಂದ..**

**ಅಭಿವೃದ್ಧಿ-ತಯಾರಿ:** ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿರುವ ಕೊವಿಶೀಲ್ಡ್ ಲಸಿಕೆಯನ್ನು ಅಸ್ಟ್ರಾಜೆನಿಕಾ ಕಂಪನಿ ಮಾನವ ಬಳಕೆಗಾಗಿ ಉತ್ಪಾದಿಸುತ್ತಿದೆ. ಬ್ರಿಟನ್ ಈಗಾಗಲೇ ಈ ಲಸಿಕೆಗೆ ಅನುಮೋದನೆ ನೀಡಿದೆ.

**ಶೇ. 70.4 ಪರಿಣಾಮ:** ಲಭ್ಯವಿರುವ ಮಧ್ಯಂತರ ದತ್ತಾಂಶ ಗಳ ಪ್ರಕಾರ, ಸೋಂಕಿನ ಲಕ್ಷಣ ಹೊಂದಿದವರ ಚಿಕಿತ್ಸೆಯಲ್ಲಿ ಕೊವಿಶೀಲ್ಡ್ ಲಸಿಕೆ ಶೇಕಡ 70.4 ಪರಿಣಾಮ ಬೀರುತ್ತದೆ. ಇನ್ನೆರಡು ಪ್ರಮುಖ ಲಸಿಕೆಗಳಾದ ಫೈಜರ್-ಬಯೋಎನ್‌ಟೆಕ್ ಮತ್ತು ಮಾಡರ್ನಾ ಲಸಿಕೆಗಳು ಅನುಕ್ರಮವಾಗಿ ಶೇ. 95 ಮತ್ತು ಶೇ. 94.5 ಪರಿಣಾಮ ಹೊಂದಿವೆ.